**5ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಹಾಗೂ ಜೆಎಂಎಫ್ ಸಿ, ಮಂಗಳೂರು, ದ.ಕ.**

ದಿ: 13.08.2024ರಂದು ಸಾಕ್ಷಿದಾರರನ್ನು ಕರೆಯಿಸಿ, ಪ್ರಮಾಣವಚನ ಬೋಧಿಸಲಾಯಿತು.

**ಮುಂದುವರೆದ ಪಾಟಿ ಸವಾಲು– ಪ್ರತಿವಾದಿ ಪರವಾಗಿ, ಶ್ರೀ ಎಸ್ ಆರ್ ಎಸ್ ವಕೀಲರಿಂದ,**

1. ನಿಪಿ–7 ದಾಖಲಾತಿಯು ನನ್ನ ಮತ್ತು ಪ್ರತಿವಾದಿಯ ಜಾಗಕ್ಕೆ ಸಂಬಂಧಿಸಿದ ದಾಖಲಾತಿಯೇ ಎಂದರೆ ಸಾಕ್ಷಿಯು ನನ್ನ ಜಾಗಕ್ಕೆ ಮಾತ್ರ ಸಂಬಂಧಿಸಿರುತ್ತದೆ ಎಂದು ನುಡಿದಿರುತ್ತಾರೆ. ನಿಪಿ–7 ದಾಖಲಾತಿಯು ಸರ್ಕಾರಿ ಜಾಗಕ್ಕೆ ಒತ್ತುವರಿಯಾದ ಬಗ್ಗೆ ಪಡೆದುಕೊಂಡ ಪತ್ರವೇ ಎಂದರೆ ಸಾಕ್ಷಿಯು ನಾನು ಮಾಹಿತಿ ಹಕ್ಕು ಅಧಿನಿಯಮದಡಿಯಲ್ಲಿ ದಾಖಲಾತಿಗಳನ್ನು ಪಡೆದುಕೊಂಡಿದ್ದು ಅದರೊಂದಿಗೆ ಹಾಜರು ಮಾಡಿರುತ್ತಾರೆ ಎಂದು ನುಡಿದಿರುತ್ತಾರೆ.

2. ನಿಪಿ–8 ದಾಖಲಾತಿಯು ವೆಂಕಟೇಶ್ ಆಚಾರ್ಯ ರವರು ಜಿಲ್ಲಾಧಿಕಾರಿಗಳ ತಾಂತ್ರಿಕ ವಿಭಾಗ, ಬೆಂಗಳೂರು ಇವರಿಗೆ ಬರೆದ ಪತ್ರ ಎಂದರೆ ಸರಿ. ನಿಪಿ–9 ದಾಖಲಾತಿಯನ್ನು ವೆಂಕಟೇಶ್ ಆಚಾರ್ಯರವರು ಸರ್ಕಾರಿ ಜಮೀನಿನ ಗಡಿಯನ್ನು ಗುರುತಿಸುವ ಬಗ್ಗೆ ಆಯುಕ್ತರು, ಬೆಂಗಳೂರು ಇವರಿಗೆ ಬರೆದ ಪತ್ರ ಎಂದರೆ ಸರಿ. ನಿಪಿ–10 ದಾಖಲಾತಿಯನ್ನು ವೆಂಕಟೇಶ್ ಆಚಾರ್ಯವರು ಜಿಲ್ಲಾಧಿಕಾರಿಯವರಿಗೆ ಬರೆದ ಪತ್ರ ಎಂದರೆ ಸರಿ. ನಿಪಿ–11ನ್ನು ವೆಂಕಟೇಶ್ ಆಚಾರ್ಯವರು ಸರ್ಕಾರಿ ಜಮೀನಿನ ಗಡಿಯನ್ನು ಗುರುತಿಸುವ ಬಗ್ಗೆ ತಹಶೀಲ್ದಾರ್ ರವರಿಗೆ ಬರೆದ ಪತ್ರ ಎಂದರೆ ಸರಿ. ನಿಪಿ–8 ರಿಂದ ನಿಪಿ–16 ದಾಖಲಾತಿಗಳು ವೆಂಕಟೇಶ್ ಆಚಾರ್ಯರವರು ಸರ್ಕಾರಿ ಜಮೀನಿನ ಗಡಿ ಗುರುತಿಸುವ ಬಗ್ಗೆ ಬರೆದಂಹತ ಪತ್ರಗಳು ಎಂದರೆ ಸರಿ.

3. ನಿಪಿ–17 ದಾಖಲಾತಿಯು ವೆಂಕಟೇಶ್ ಆಚಾರ್ಯರವರು O.S. No.485/2007ರಲ್ಲಿ ಸಾಕ್ಷಿ ನುಡಿದಿರುವ ಮುಖ್ಯ ಪ್ರಮಾಣ ಪತ್ರ ಎಂದರೆ ಸರಿ. ಸದರಿ ದಾವೆಯಲ್ಲಿ ಈ ದಾವೆಯ ಪ್ರತಿವಾದಿ ವಸಂತ ಶೆಟ್ಟಿ ಪಕ್ಷಗಾರರಾಗಿರುವುದಿಲ್ಲ ಎಂದರೆ ಸರಿ. ಸದರಿ ದಾವೆಯು ನನ್ನ ಮತ್ತು ಪ್ರತಿವಾದಿಗಳ ಆಸ್ತಿಗೆ ಸಂಬಂಧಪಟ್ಟ ದಾವೆ ಎಂದರೆ ಸರಿಯಲ್ಲ. ಸದರಿ ದಾವೆಯನ್ನು ಮಂಗಳೂರು ಮಹಾನಗರಪಾಲಿಕೆಯವರು ನನ್ನ ಆಸ್ತಿಯನ್ನು ಒತ್ತುವರಿ ಮಾಡಿದ ಬಗ್ಗೆ ಹಾಕಿರುವ ದಾವೆ ಎಂದರೆ ಸರಿ.

4. ನಿಪಿ-18 ದಾಖಲಾತಿಯು ಕುಸುಮಕಾರ್ ರವರು ನಾನು ಮಂಗಳೂರು ಮಹಾನಗರಪಾಲಿಕೆಯವರ ವಿರುದ್ಧ ಹೂಡಿದ ದಾವೆಯಲ್ಲಿ ಸಾಕ್ಷ್ಯ ನುಡಿದಿರುವ ಪ್ರಮಾಣ ಪತ್ರ ಮತ್ತು ಪಾಟಿ ಸವಾಲು ಎಂದರೆ ಸರಿ. ನಿಪಿ-19 ದಾಖಲಾತಿಯು ರಾಮಚಂದ್ರ ರವರು ನಾನು ಮಂಗಳೂರು ಮಹಾನಗರಪಾಲಿಕೆಯವರ ವಿರುದ್ಧ ಹೂಡಿದ ದಾವೆಯಲ್ಲಿ ಸಾಕ್ಷ್ಯ ನುಡಿದಿರುವ ಪ್ರಮಾಣ ಪತ್ರ ಮತ್ತು ಪಾಟಿ ಸವಾಲು ಎಂದರೆ ಸರಿ. ನಿಪಿ-20 ದಾಖಲಾತಿಯು ವೆಂಕಟೇಶ s/o. ರಾಜುಮೊಯ್ಲಿ, ಸರ್ವೆಯರ್ ರವರು ನಾನು ಮಂಗಳೂರು ಮಹಾನಗರಪಾಲಿಕೆಯವರ ವಿರುದ್ಧ ಹೂಡಿದ ದಾವೆಯಲ್ಲಿ ಸಾಕ್ಷ್ಯ ನುಡಿದಿರುವ ಪ್ರಮಾಣ ಪತ್ರ ಮತ್ತು ಪಾಟಿ ಸವಾಲು ಎಂದರೆ ಸರಿ.

5. ನಿಪಿ-21 ದಾಖಲಾತಿಯು ಅಳತೆ ಮಾಡಿದ ಸಂದರ್ಭದಲ್ಲಿ ಸರಿಯಾದ ಅಳತೆ ಆಗದೇ ಇರುವ ಬಗ್ಗೆ ನ್ಯಾಯಾಲಯದಲ್ಲಿ ತಪ್ಪನ್ನು ಒಪ್ಪಿಕೊಂಡಿದ್ದು ಸದರಿ ವಿಷಯದ ಕುರಿತು ಹೂಡಿರುವ ದಾವೆ ಎಂದರೆ ಸರಿ. ಸದರಿ ದಾವೆಯಲ್ಲಿ ನನಗೂ ಮತ್ತು ಪ್ರತಿವಾದಿಗೆ ಸಂಬಂಧಪಟ್ಟಂತೆ ಯಾವುದೇ ವಿವಾದ ಇರುವುದಿಲ್ಲ ಎಂದರೆ ಸರಿ. ನಿಪಿ-22 ತೀರ್ಪು ಸದರಿ ದಾವೆಯು ವಜಾ ಆಗಿರುವ ಬಗ್ಗೆ ಹಾಜರು ಮಾಡಿರುವ ದಾಖಲಾತಿ ಎಂದರೆ ಸರಿ. ನಿಪಿ-23 ದಾಖಲಾತಿಯು ನನ್ನ ವಕೀಲರು ಆಯುಕ್ತರಿಗೆ ನೀಡಿದಂತಹ ನೋಟೀಸ್ ಎಂದರೆ ಸರಿ. ನಿಪಿ-23ರಲ್ಲಿ ನನಗೂ ಮತ್ತು ಪ್ರತಿವಾದಿಗೆ ಸಂಬಂಧಿಸಿದಂತ ವಿವಾದ ಇರುವುದಿಲ್ಲ ಎಂದರೆ ಸರಿ.

6. ನಿಪಿ-24 ದಾಖಲಾತಿಯು ನನಗೂ ಮತ್ತು ಪ್ರತಿವಾದಿಗೆ ಸಂಬಂಧಿಸಿದ ವಿವಾದದ ಕುರಿತು ದಾಖಲಾತಿಯಾಗಿರುವುದಿಲ್ಲ ಎಂದರೆ ಸರಿ. ನಿಪಿ-25 ದಾಖಲಾತಿಯು ನಮ್ಮ ಕುಟುಂಬದ ಒಳಗೆ ಆಸ್ತಿಗಳ ಕುರಿತು ಮಾಡಿರುವ ವ್ಯಾಜ್ಯ ಮತ್ತು ಈ ದಾವೆಯ ಪ್ರತಿವಾದಿಗೂ ಸದರಿ ನಿಪಿ-25 ದಾಖಲಾತಿಗೂ ಯಾವುದೇ ಸಂಬಂಧ ಇರುವುದಿಲ್ಲ ಎಂದರೆ ಸರಿ. ನಿಪಿ-26 ದಾಖಲಾತಿಯು ಪ್ರತಿವಾದಿಗೂ ಮತ್ತು ನನಗೂ ಇರುವ ಆಸ್ತಿಗೆ ಸಂಬಂಧಪಟ್ಟ ವಿವಾದದ ಕುರಿತು ದಾಖಲಾಯಾಗಿರುವುದಿಲ್ಲ ಎಂದರೆ ಸರಿ.

7. ನನ್ನ ಆಸ್ತಿಯ ಪೂರ್ವ ದಿಕ್ಕಿನಲ್ಲಿ 12 ಅಡಿ ಅಗಲದ ಸರ್ಕಾರಿ ತೋಡು ಇತ್ತು. ಸದರಿ ತೋಡು ನಾನು ಹುಟ್ಟಿದಾಗಿನಿಂದಲೂ ಇರುತ್ತದೆ. ಪ್ರಸ್ತುತ ಸದರಿ ತೋಡಿನಲ್ಲಿ ಸರ್ಕಾರದವರು 7

ಅಡಿ ಜಾಗವನ್ನು ಅಳತೆ ಮಾಡಿಕೊಟ್ಟಿರುತ್ತಾರೆ ಮತ್ತು ಪ್ರತಿವಾದಿಗೆ ನನ್ನ ಜಾಗದಲ್ಲಿ 7 ಅಡಿ ಜಾಗವನ್ನು ಅಳತೆ ಮಾಡಿ ಕೊಟ್ಟಿರುತ್ತಾರೆ. 2004ನೇ ಸಾಲಿನಲ್ಲಿ ನಾನು ಮೇಲೆ ಹೇಳಿದ 7 ಅಡಿ ಜಾಗವನ್ನು ಪ್ರತಿವಾದಿಗೆ ಅಳತೆ ಮಾಡಿಕೊಟ್ಟಿರುತ್ತಾರೆ. ನನ್ನ ಆಸ್ತಿಯ ಪೂರ್ವ ದಿಕ್ಕಿಗೆ ಇರುವ ಸರ್ಕಾರಿ ತೋಡು ಮೊದಲು 3 ಅಡಿ ಅಗಲ ಇತ್ತು ಎಂದರೆ ಸರಿಯಲ್ಲ. ಸದರಿ ತೋಡು ಪ್ರಸ್ತುತ 10 ಅಡಿ ಅಗಲವಾಗಿರುತ್ತದೆ ಎಂದರೆ ಸರಿಯಲ್ಲ. ಸದರಿ ತೋಡು ಮೊದಲಿನಿಂದಲೂ 12 ಅಡಿ ಅಗಲ ಇತ್ತು ಎಂದು ಹೇಳಲು ನಾನು ಯಾವುದೇ ದಾಖಲಾತಿಯನ್ನು ಹಾಜರು ಮಾಡಿರುವುದಿಲ್ಲ. ನಾನು ಹಾಜರು ಮಾಡಿರುವ ನಿಪಿ-8 ರಿಂದ ನಿಪಿ-26 ದಾಖಲಾತಿಗಳು ಈ ದಾವೆಗೆ ಸಂಬಂಧಿಸಿದ ದಾಖಲಾತಿಗಳಾಗಿರುವುದಿಲ್ಲ ಎಂದರೆ ಸರಿಯಲ್ಲ.

8. ನನಗೆ ಸುಳ್ಳು ದಾವೆಗಳನ್ನು ಹೂಡುವುದು ಮತ್ತು ಸುಳ್ಳು ದೂರುಗಳನ್ನು ಮಾಡುವುದು ಅಭ್ಯಾಸವಾಗಿಟ್ಟುಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಸುಳ್ಳು ದಾಖಲಾತಿಗಳನ್ನು ಸೃಷ್ಟಿಮಾಡಿಕೊಂಡು ಪ್ರತಿವಾದಿಯ ವಿರುದ್ಧ ಸುಳ್ಳು ದಾವೆಯನ್ನು ಹೂಡಿರುತ್ತೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ** ಇಲ್ಲ.

(ಮುಕ್ತ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಸ.ಇ.ಎ.ಒ.,

5ನೇ ಅಧಿಕ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.
ಮಂಗಳೂರು.[C/c]